ಸಾಕ್ಷಿಯನ್ನು ದಿಃ **03.11.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ **1** ರಿಂದ **3** ರವರ ಪರ ಶ್ರೀ ಡಿ.ಎಂ.ಕೆ ವಕೀಲ**ರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮ್ಮ ತಾಯಿಗೆ ಅವರ ತಂದೆ ಮನೆಯಿಂದ ಅಂದರೆ ನನ್ನ ಅಜ್ಜನ ಆಸ್ತಿಯಿಂದ ಬರಬೇಕಾದ ಭಾಗದಲ್ಲಿ ನನಗೂ ಭಾಗ ಬರಬೇಕು ಎಂದು ನಾನು ಬರೆಸಿ ಹಾಕಿಸಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನನ್ನ ವಕೀಲರಿಗೆ ನಾನೆ ಹೇಳಿದ್ದೆ. ನಮಗೆ ಭಾಗ ಬರಬೇಕು ಎಂದು ಪಂಚಾಯಿತಿ ಸೇರಿಸಿದ್ದು ಸದರಿ ಪಂಚಾಯಿಯನ್ನು ನನ್ನ ತಾಯಿ ಬದುಕಿದ್ದಾಗ ನನ್ನ ಸೋದರ ಮಾವಂದಿರು ನನ್ನ ಅಜ್ಜನ ಆಸ್ತಿಯನ್ನು ವಿಭಾಗ ಮಾಡಿಕೊಳ್ಳುತ್ತಿದ್ದಾಗ ಹೋಗಿದ್ದರು ಎಂದು ಬರೆಸಿದ್ದೇನೆ. ಸದರಿ ಪಂಚಾಯಿತಿಯಲ್ಲಿ ನನ್ನ ಚಿಕ್ಕ ತಾತ ಬಸವಣ್ಣ, ಕರಿಯಯ್ಯ, ಸೋಮಣ್ಣ ಬಿಳಿಕೆರೆ ನವರು ಸೇರಿದ್ದರು. ಈ ಪಂಚಾಯಿತಿ ವಿಚಾರ ನನ್ನ ಗಮನಕ್ಕೆ ನ್ಯಾಯಾಲಯದಿಂದ ಪ್ರತಿವಾದಿಗಳಿಗೆ ನೊಟೀಸು ಕಳುಹಿಸಿದ ನಂತರ ಬಂದಿದೆ. ನನ್ನ ತಾಯಿಗೆ ತಿಳಿಸದೆ ಪ್ರತಿವಾದಿಗಳು ಅವರವರೆ ವಿಭಾಗ ಮಾಡಿಕೊಂಡಿದ್ದಾರೆ ಎಂದು ತಿಳಿಸಿರುವ ವಿಚಾರ ಸುಳ್ಳು ನನ್ನ ತಾಯಿಯ ಒಪ್ಪಿಗೆ ಪಡದೆ ಅವರುಗಳು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಿಭಾಗ ಮಾಡಿಕೊಳ್ಳುವಾಗ ಯಾರ್ಯಾರು ಸೇರಿದ್ದರು ಎಂದು ನನಗೆ ಗೊತ್ತಿಲ್ಲ, ನನ್ನ ತಂದೆ ಸೇರಿದ್ದರು ಎಂದು ಮಾತ್ರ ಗೊತ್ತಿದೆ.

ನನ್ನ ಮದುವೆ ಆಗಿ 3 ½ ವರ್ಷ ಆಗಿದೆ. ನನ್ನ ತಾಯಿಯ ಮದುವೆ ಆಗಿ 30 –32 ವರ್ಷ ಆಗಿರಬಹುದು. ನನ್ನ ತಾಯಿಯ ಮದುವೆ ಆಗಿ ಸುಮಾರು 43 ವರ್ಷ ಆಗಿದೆ ಎಂದರೆ ಗೊತ್ತಿಲ್ಲ, ಆದರೆ ನನ್ನ ಹಿರಿಯ ಅಕ್ಕನಿಗೆ 38 ವರ್ಷ ವಯಸ್ಸಾಗಿದೆ ಎನ್ನುತ್ತಾರೆ. ನನ್ನ ತಾಯಿಯ ತಾಯಿಗೆ ಅವರ ತಂದೆ ಮನೆಯಿಂದ ಕೊಟ್ಟಿದ್ದ ಸುಮಾರು 60 ಗ್ರಾಂ ನಷ್ಟು ತೂಕದ ಚಿನ್ನದ ಕಾಸಿನ ಸರವನ್ನು ನಮ್ಮ ತಾಯಿಗೆ

ಪ್ರತಿವಾದಿಯವರು ಮಾಡಿಕೊಂಡ ವಿಭಾಗದ ಸಮಯದಲ್ಲಿ ಕೊಟ್ಟು ನನ್ನ ತಾಯಿಯ ಒಪ್ಪಿಗೆಯೊಂದಿಗೆ ಪ್ರತಿವಾದಿಗಳು ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, ನನ್ನ ತಾಯಿ ನನಗೆ ಹೇಳಿರುವುದೇನಂದರೆ ಕಾಸಿನ ಸರದಲ್ಲಿ 2 ಕ್ವಾಯಿನ್ ಗಳನ್ನು ಮಾತ್ರ ನನಗೆ ಕೊಟ್ಟಿದ್ದಾರೆ ಅದೆ ರೀತಿ ಸದರಿ ವಿಭಾಗದ ಸಮಯದಲ್ಲಿ ಚಿನ್ನದ ಕಾಸಿನ ಸರದ ಜೊತೆಗೆ ನಮ್ಮ ತಾಯಿಗೆ ಪ್ರತಿವಾದಿಗಳು ಅವರ ಮನೆಕಡೆಯಿಂದ 6 ಕುರಿಗಳನ್ನು ಕೂಡ ಉಡುಗೊರೆಯಾಗಿ ನೀಡಿದ್ದರು ಎಂದರೆ ಸರಿಯಲ್ಲ. ಅದೆ ರೀತಿ ನಮ್ಮ ತಾಯಿಗೆ ಅವರ ಮದುವೆ ಸಮಯದಲ್ಲಿ ಚಿನ್ನದ ಓಲೆ ಮತ್ತು ಸಂಪ್ರದಾಯದಂತೆ ವಾಚ್, ಉಂಗುರ ಮತ್ತು ಬಟ್ಟೆ ಇತ್ಯಾದಿ ನೀಡಿ ಪ್ರತಿವಾದಿ 1 ಮತ್ತು 3 ರವರೆ ತಮ್ಮ ಸ್ವಂತ ಖರ್ಚಿನಿಂದ ಮದುವೆ ಮಾಡಿಕೊಟ್ಟಿದ್ದರು ಎಂದರೆ, ಅವರ ಮದುವೆ ವಿಚಾರ ನನಗೆ ಗೊತ್ತಿಲ್ಲ, ಓಲೆ ಕೊಟ್ಟಿದ್ದರು ಆದರೆ ಅದು ಸರಿಯಿಲ್ಲ ಎಂದು ನಮ್ಮ ತಾಯಿ ಆಗಾಗ್ಗೆ ಬೈಯ್ಯುತ್ತಿದ್ದರು. ನಮ್ಮ ತಾಯಿ ಮದುವೆ ಸಮಯದಲ್ಲಿ ಪ್ರತಿವಾದಿಗಳಿಗೂ ಕಷ್ಟ ಇದ್ದು ಅವರ ಮದುವೆ ಖರ್ಚಿಗಳಿಗೆ ಬಿಳಿಕೆರೆ ಪಾರ್ತಮ್ಮನವರಿಂದ 20 ಸಾವಿರಗಳನ್ನು, ದಲ್ಲಾಳ ಕೊಪ್ಪಲು ಹಣಮಾಯಿಗೌಡ ರವರಿಂದ ರೂಪಾಯಿ 20 ಸಾವಿರಗಳನ್ನು ಸಾಲ ಮಾಡಿ ನನ್ನ ತಾಯಿಯ ಮದುವೆ ಖರ್ಚು ಮಾಡಿದ್ದರು ಎಂದರೆ ಅದರ ವಿಚಾರ ನನಗೆ ಗೊತ್ತಿಲ್ಲ. **ಈ ಹಂತದಲ್ಲಿ ಈ ವಿಚಾರ ಪ್ರತಿವಾದಿಗಳ ಲಿಖಿತ ಹೇಳಿಕೆ ಕಾಣಿಸಿಲ್ಲ ಎಂದು ವಾದಿ ಪರ ವಕೀಲರು ನುಡಿದಿರುತ್ತಾರೆ.** ಪ್ರತಿವಾದಿ 1 ರಿಂದ 4 ರವರು ವಿಭಾಗ ಮಾಡಿಕೊಳ್ಳುವಾಗ ನನ್ನ ತಂದೆ ಮತ್ತು ಪ್ರತಿವಾದಿಗಳ ಚಿಕ್ಕಪ್ಪನವರೆ ನಿಂತು ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ತಾಯಿಗೆ ಇಬ್ಬರು ಹೆಣ್ಣು ಮಕ್ಕಳು ನಾನೊಬ್ಬನೆ ಗಂಡು ಮಗನಾಗಿದ್ದೇನೆ. ನನಗೆ ಒಬ್ಬ ಅಕ್ಕ, ಒಬ್ಬ ತಂಗಿ ಇದ್ದಾರೆ. ನನ್ನ ಅಕ್ಕ ಲತಾ ರವರ ಮದುವೆ ಆಗಿ 20 ವರ್ಷಗಳಾಗಿವೆ. ಅವರನ್ನು ಕೊತ್ತೆಗಾಲಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ನನ್ನ ಅಕ್ಕ ಲತಾ ರವರ ಮದುವೆ ಸಮಯದಲ್ಲಿ 1 ನೇ ಪ್ರತಿವಾದಿ ನಿಂತು ನನ್ನ ಅಕ್ಕನಿಗೆ 1 ಲಾಂಗ್ ಚೈನು ಮತ್ತು ಮದುವೆಗೆ 15 ಲಕ್ಷ ಖರ್ಚು ಮಾಡಿ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಕೂಡ ನನ್ನ ತಾಯಿ ಮರಣ ಹೊಂದಿದಾಗ ಎಲ್ಲಾ ಸಂಪ್ರದಾಯ ಬದ್ದ ಕರ್ತವ್ಯಗಳನ್ನು ಮತ್ತು ಖರ್ಚು ವೆಚ್ಚಗಳನ್ನು ಪ್ರತಿವಾದಿಗಳು ನಿಭಾಯಿಸಿದ್ದಾರೆ ಎಂದರೆ

ಬರುವ ಹಾಗೆ ಎಲ್ಲರೂ ಬಂದರು ಮತ್ತು ಖರ್ಚು ಮಾಡುತ್ತೇನೆ ಎಂದರು ಆದರೆ ಮಗನಾಗಿ ನಾನೆ ಮಾಡುತ್ತೇನೆ ಬೇಡ ಎಂದು ಹೇಳಿದೆ. ನಾನು ಹೇಳುತ್ತಿರುವ ವಿಚಾರವೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ತಾಯಿ ಮತ್ತು ನಮ್ಮ ತಂದೆಯ ಗಮನಕ್ಕೆ ಇದ್ದಂತಯೆ ವಿಭಾಗ ಮಾಡಿಕೊಂಡು ಖಾತೆ ಮಾಡಿಕೊಂಡು ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಖಾತೆ ಮಾಡಿಸಿಕೊಳ್ಳುವಾಗ ನನ್ನ ತಾಯಿಯನ್ನು ಕರೆದಿರಲಿಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ. 22 ರ ಆರ್.ಟಿ.ಸಿಯಲ್ಲಿ ಎಂ.ಆರ್ ನಂ. 9/2010-11 ದಿಃ 21/12/2010 ವಿಭಾಗ ಎಂದು ಕಾಣಿಸಲಾಗಿದೆ ಎಂದರೆ ಸರಿ. ಅದೆ ರೀತಿ ನಿಪಿ. 23 ರಿಂದ 26 ರ ಆರ್.ಟಿ.ಸಿಗಳಲ್ಲಿ ವಿಭಾಗದ ಮೂಲಕ ಎಂದಿದೆ ಎಂದರೆ ಅವರು ಏನು ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ ಈ ವಿಚಾರ ತಿಳಿದೆ ನಮ್ಮ ತಾಯಿ ನೊಟೀಸು ಕಳುಹಿಸಿದ್ದರು ಎನ್ನುತ್ತಾರೆ. ನಮ್ಮ ತಾಯಿ ಒಪ್ಪಿಗೆ ಮೇರೆಗೆ ಪ್ರತಿವಾದಿಯರೆಲ್ಲಾ ವಿಭಾಗ ಮಾಡಿಕೊಂಡು ಖಾತೆಗಳನ್ನು ಮಾಡಿಸಿಕೊಂಡಿದ್ದರೂ ಕೂಡ ನಾವುಗಳ ನಮ್ಮ ತಾಯಿ ಮೇಲೆ ಒತ್ತಡ ಹೇರಿ ಏಕೆ ನೀನು ಅವರನ್ನು ಪ್ರಶ್ನೆ ಮಾಡುತ್ತಿಲ್ಲ, ನಿನ್ನ ಹಿಸ್ಸೆಯನ್ನು ಕೇಳುತ್ತಿಲ್ಲ ಎಂದು ಹೇಳಿಕೊಟ್ಟು ಈ ದಾವೆ ಹೂಡಿಸಿದ್ದೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.